ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
ಕೆಲವರನ್ನು ಪರಿಚಯಿಸುವಾಗ 'ಇವರು ನಮಗೆ ತುಂಬಾ ಬೇಕಾದವರು' ಎನ್ನುವರಲ್ಲ, ಅದರರ್ಥ?



**Bake** ಆದವರು – ಇವರಿಗಾಗಿ ಬಹಳ ಬೆಂದವರೆಂದು.

ಬಿ. ಚಂದ್ರೇಗೌಡ, ಬೆಂಗಳೂರು
ಇತರರ ಸಂಗತಿಗಳ ಬಗ್ಗೆ ಮಾನವನಿಗೆ ಕೌತುಕ ಏಕೆ?
ಕಿಟಕಿಯ ಹೊರಗಿನ ಪ್ರಪಂಚ ಕಿಟಕಿಯ ಒಳಗಿನದಕ್ಕಿಂತ ಸ್ವಾರಸ್ಯಕರ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
ಬೈಪಾಸ್ ರಸ್ತೆಗೂ ಬೈಪಾಸ್ ಸರ್ಜರಿಗೂ ಏನು ವ್ಯತ್ಯಾಸ?
ಬೈಪಾಸ್ ರಸ್ತೆ ಪಯಣವನ್ನು ಮೊಟಕುಗೊಳಿಸುತ್ತದೆ; ಬೈಪಾಸ್ ಸರ್ಜರಿ ಪಯಣವನ್ನು ಹೆಚ್ಚಿಸುತ್ತದೆ.

ಕಾವ್ಯಶ್ರೀ ಪತ್ರಿಮಠ, ಸುರಪುರ
ಸಂಸಾರಯುದ್ಧದಲ್ಲಿ ಕದನ ವಿರಾಮ ಯಾವಾಗ?



ಮಗು ವ್ಯಾ ಎನ್ನುತ್ತಾ ಎದ್ದಾಗ.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ಬಡವರು ಹಸಿದಿರುವುದು ಅಕ್ಕರೆಗಾಗಿ. ಮಂತ್ರಿಗಳು?
ಹೈಪೋಸ್ಟ್ ನೀಡುವ ಹೈಕಮಾಂಡಿನ ಆ ಕರೆಗಾಗಿ.

ಬಾ.ರಂ. ಸುರೇಶ್, ಶಿವಮೊಗ್ಗ
ದುಡ್ಡಿದ್ದವನು ದೊಡ್ಡಪ್ಪ; ದುಡ್ಡಿಲ್ಲದವನು?
ಚಿಕ್ಕಪ್ಪ!

ಪಿ.ಎನ್. ಶ್ರೀವತ್ಸ, ಬೆಂಗಳೂರು
ಈ ಕೋಮುಗಲಭೆ ಹೀಗೇ ಮುಂದುವರೆಯುತ್ತಾ ಹೋದರೆ ಎಲ್ಲಿ ಹೋಗಿ ನಿಲ್ಲಬಹುದು?
ಕೋರ್ಟಿನ ಕಟಕಟೆಯಲ್ಲಿ.

ನಖಾತೆ ಆನಂದರಾವ್, ಮೈಸೂರು
ಬುದ್ಧನ ಕಾಲದಲ್ಲಿ ಜಾತಿಯುದ್ಧ ಇದ್ದಿದ್ದರೆ ಅವನು ಜನರಿಗೆ ಏನು ಹೇಳುತ್ತಿದ್ದ?
ಬುದ್ಧಂ ಶರಣಂ ಗಚ್ಛಾಮಿಯ ಬದಲು ಸದ್ಬುದ್ಧಿ ಶರಣಂ ಗಚ್ಛಾಮಿ ಎನ್ನಿರೆನ್ನುತ್ತಿದ್ದ.

ಜೆ.ಆರ್. ಆದಿನಾರಾಯಣಮುನಿ, ಕೊಳ್ಳೇಗಾಲ
ಹಿಂದಿನ ಲಂಕಾದಹನಕ್ಕೂ, ಇಂದಿನ ಲಂಕಾದಹನಕ್ಕೂ ಏನು ವ್ಯತ್ಯಾಸ?
ಆಗ ಭಾರತದ ವಾನರವೀರ ಬೇಕಾಗಿತ್ತು. ಈಗ ಲೋಕಲ್ ಕೋತಿಗಳೇ ಸಾಕಾದವು.

ಮಹಾವೀರ ಕಾಸರ, ಶಿವಮೊಗ್ಗ
ವನವಾಸಕ್ಕೂ ರೆಸಾರ್ಟ್ ವಾಸಕ್ಕೂ ಏನು ವ್ಯತ್ಯಾಸ?
ವನವಾಸ ನಿಶೆ; ರೆಸಾರ್ಟ್ ವಾಸ ನಶೆ.

ರಾಜಶೇಖರ ಹಾದಿಮನಿ, ಧಾರವಾಡ
ರಾಜಕಾರಣಿಗಳಿಂದ ದೇಶ ಗಬ್ಬೆದ್ದು ನಾರುತ್ತಿದೆ. ಇವರಿಗೆ ಪ್ರಜ್ಞೆ ಇಲ್ಲವೆ?
ಆರಿಸಿದವರಿಗೇ ಇಲ್ಲದ ಪ್ರಜ್ಞೆ ಅವರಿಗೆ ಇರಬೇಕೆಂದು ನಿರೀಕ್ಷಿಸುವುದೇ ತಪ್ಪು.

ಪೆಮ್ಮಳ್ಳಿ ಚಿಕ್ಕಣ್ಣ, ಪಾವಗಡ
ಬೆಲ್ ಸಹೋದರರು ಫೋನನ್ನು ಕಂಡುಹಿಡಿಯದಿದ್ದಿದ್ದರೆ?
ಬೇರೆಯವರು ಕಂಡುಹಿಡಿಯುತ್ತಿದ್ದರು. ವಿಜ್ಞಾನ ತಡೆರಹಿತ ಝರಿ.

ಕೆ.ವಿ. ಗೋವಿಂದಾಚಾರಿ, ಮೈಸೂರು
ತ್ರೇತಾಯುಗದಲ್ಲಿ ಶ್ರೀರಾಮ, ದ್ವಾಪರದಲ್ಲಿ ಶ್ರೀಕೃಷ್ಣ. ಕಲಿಯುಗದಲ್ಲಿ?
ರಾಮರಾಮಾ, ಕೃಷ್ಣಕೃಷ್ಣಾ...!

ಹರಿತಸ, ಬೆಂಗಳೂರು
ಖಾದಿ ತೊಟ್ಟ ಧುರೀಣರಿಗೂ ಕಾವಿ ತೊಟ್ಟ ಮಠಾಧಿಪತಿಗೂ ವ್ಯತ್ಯಾಸವೇನು?
ಖಾದಿಯಿಂದ ಒಳಿತನ್ನು ಅಪೇಕ್ಷಿಸುವುದು ನಿಂತಿದೆ. ಕಾವಿಗೆ ಸಂಶಯಭರಿತ ಮರ್ಯಾದೆ ಇದೆ.

## ವಾರದ ಪ್ರಶ್ನೆ

ರಮೇಶ ಜ. ಬೊಂಗಾಳೆ, ಬೈಲಹೊಂಗಲ
ಚಿನ್ನ ಮಣ್ಣಲ್ಲೇ ಹುಟ್ಟಿದ್ದರೂ ಇಷ್ಟೊಂದು ಬೆಲೆ ಏಕೆ ಸರ್?
ಹೆಣ್ಣಲ್ಲಿ ನೆಲೆ ನಿಲ್ಲುವುದಲ್ಲ! ಇಷ್ಟಗೆ ಇಷ್ಟವಾದವೆಲ್ಲ ಅಮೂಲ್ಯವೇ.

ಚನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
ವಿಶ್ವಶಾಂತಿಗಾಗಿ ಮತ್ತಿನ್ನೇನು ಮಾಡಬೇಕು ರಾಮ್?
ಮಗು, ಹೊಗೆ ಕಡಿಮೆ; ಸ್ನೇಹ, ನಗೆ ಹೆಚ್ಚಳ.

ಪಿ.ಜೆ. ರಾಘವೇಂದ್ರ, ಮೈಸೂರು
ವಾರ್ತಾವಾಚಾಳಿಗಳಿಗೆ ಗಂಟಲು ಕಟ್ಟಿಕೊಳ್ಳುವುದಿಲ್ಲವೇಕೆ?
ಗೂಬೆಗೆ ಗಂಟಲು ಕಟ್ಟುವುದಿಲ್ಲ.

ಅಮರಯ್ಯ ಪತ್ರಿಮಠ, ಸುರಪುರ
ಈ ಭೂಮಿಯಲ್ಲಿ ಬಣ್ಣಬಣ್ಣದ ಹೂಗಳು ಇಲ್ಲದಿದ್ದರೆ ಏನಾಗುತ್ತಿತ್ತು?



ವಿದ್ಯಾರ್ಥಿಗಳು ಓದುವ ಕವನಗಳ ಸಂಖ್ಯೆ ಕಡಿಮೆಯಾಗುತ್ತಿತ್ತು.

ಕೆ.ಸಿ. ಸತ್ಯನಾರಾಯಣ
ನಾವು ನಮ್ಮತನವನ್ನು ಉಳಿಸಿಕೊಳ್ಳಲು ಏನು ಮಾಡಬೇಕು ಗುರುಗಳೆ?
ಆ 'ತನ' ನಿಮ್ಮ ಪರಿಸರಕ್ಕೆ ಸೂಕ್ತವೇ ಎಂದು ಅರಿತುಕೊಳ್ಳಬೇಕು.

ಬಿ.ಎಸ್. ನಾರಾಯಣಸ್ವಾಮಿ, ಬಿ.ಹೊಸಹಳ್ಳಿ
ನನ್ನ ಕನಸಲ್ಲಿ ಸಿನಿಮಾ ನಟಿಯರೇ ಬಂದುಹೋಗುವರು. ಅತ್ತೆಯ ಮಗಳು ಬರಲೇ ಇಲ್ಲವಲ್ಲಾ?
ತಿಳಿಯಿತಲ್ಲ – ಅವಳು ನಿಮ್ಮ ಕಲ್ಪನೆಗೂ ನಿಲುಕದವಳು.

■ **ರಾಮ್**